ಹಾಸನ ಜಿಲ್ಲೆಯಲ್ಲಿ ಆಸ್ಪತ್ರೆ ಕಟ್ಟಡ ಕಾಮಗಾರಿಗಳ ಬಗೆ

119 ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ)
ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ. ಹಾಸನ ಜಿಲ್ಲೆ, ಹಾಸನ ತಾಲ್ಲೂಕು ಶಾಂತಿ ಗ್ರಾಮ, ಮೊಸಳೆ ಹೊಸಳ್ಳಿ, ಚನ್ನರಾಯಪಟ್ಟಣ ತಾಲ್ಲೂಕು, ಉದಯಪುರ ಮತ್ತು ಹೊಳೆನರಸೀಪುರ ತಾಲ್ಲೂಕಿನ ಪಡುವಲಹಿಪ್ಪೆ ಗ್ರಾಮಗಳಲ್ಲಿ ಸಮುದಾಯ ಆಸ್ಪತ್ರೆಯ ಕಟ್ಟಡಗಳ ಕಾಮಗಾರಿ ಕೆಲಸ ಪೂರ್ಣಗೊಂಡಿದೆಯೇ:

ಸಮುದಾಯ ಆರೋಗ್ಯ ಕೇಂದ್ರಗಳು ಮೊಸಳೆ ಹೊಸಳ್ಳಿ ಮತ್ತು ಪಡುವಲಹಿಪ್ಪೆ ಕಟ್ಟಡಗಳು ಪೂರ್ಣಗೊಂಡಿವೆ. ಸಮುದಾಯ ಆರೋಗ್ಯ ಕೇಂದ್ರಗಳು ಶಾಂತಿ ಗ್ರಾಮ ಮತ್ತು ಉದಯಪುರ ಕಟ್ಟಡ ಕಾಮಗಾರಿಗಳು ನಿರ್ಮಾಣ ಹಂತದಲ್ಲಿವೆ.

ಆ. ಹಾಗಿಲ್ಲದಿದ್ದಲ್ಲಿ, ಎಂದು ಪೂರ್ಣಗೊಳಿಸಲಾಗುವುದು: ಇದಕ್ಕಾಗಿ ಮಂಜೂರಾದ ಹಣವೆಷ್ಟು; ಖರ್ಚು ಮಾಡಿದ ಹಣವೆಷ್ಟು; ಕಟ್ಟಡಗಳನ್ನು ಪೂರ್ಣಗೊಳಿಸಲು ಅವಶ್ಯಕತೆಯಿರುವ ಹಣವೆಷ್ಟು:

ರೂ.ಲಕ್ಷಗಳಲ್ಲಿ

ಸಮುದಾಯ ಆರೋಗ್ಯ ಕೇಂದ್ರ	ಮಂಜೂರಾದ ಹಣ	ಖರ್ಚು	ಬೇಕಾದ ಹಣ
ಶಾಂತಿ ಗ್ರಾಮ	228.70	214.72	54.00
ಉದಯಪುರ	221.36	131.07	99.50

ಈ ಕಾಮಗಾರಿಗಳನ್ನು ಅಕ್ಟೋಬರ್ 2009ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.

ಇ. ಸದರಿ ಸಮುದಾಯ ಆಸ್ಪತ್ರೆಗಳಿಗೆ ಮಂಜೂರಾಗಿರುವ ಹುದ್ದೆಗಳೆಷ್ಟು; ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮಕೈಗೊಂಡಿದೆಯೇ: ಹಾಗಿದ್ದಲ್ಲಿ ಕಾರಣಗಳೇನು:

ಮೇಲ್ಕಂಡ ಪ್ರತಿ ಸಮುದಾಯ ಆರೋಗ್ಯ ಕೇಂದ್ರಕ್ಕೆ 4 ವೈದ್ಯರು, 1 ದಂತ ವೈದ್ಯರು, 6 ಶುಶ್ರೂಷಕರು, 1 ನೇತ್ರ ಸಹಾಯಕರು, 1 ಕ್ಷ-ಕಿರಣ ತಂತ್ರಜ್ಞರು, 2 ಫಾರ್ಮಸಿಸ್ಟ್, 1 ಪ್ರಯೋಗಶಾಲಾ ತಂತ್ರಜ್ಞರು, 1 ಕಛೇರಿ ಅಧೀಕ್ಷಕರು, 1 ಪ್ರಥಮ ದರ್ಜೆ ಸಹಾಯಕರು, 1 ದ್ವಿತೀಯ ದರ್ಜೆ ಸಹಾಯಕರು, 1 ಕ್ಲರ್ಕ್ ಕಮ್ ಟೈಪಿಸ್ಟ್, 2 ವಾಹನ ಚಾಲಕರು, 12 ಗ್ರೂಪ್-ಡಿ ಹುದ್ದೆಗಳು ಮಂಜೂರಾಗಿರುತ್ತವೆ.

ತಜ್ಞ ವೈದ್ಯರುಗಳನ್ನು ಸಮಾಲೋಚನೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ರೂ. 25,000 ರಿಂದ ರೂ. 50,000 ಗರಿಷ್ಠ ಮೊತ್ತದ ಮಾಸಿಕ ಗೌರವಧನವನ್ನು ಎನ್.ಆರ್.ಹೆಚ್.ಎಂ. ವತಿಯಿಂದ ನೀಡಲು ಅವಕಾಶ ಕಲ್ಪಿಸಲಾಗಿದೆ.

ಪ್ರಸ್ತುತ 5,245 ವೈದ್ಯೇತರ ಸಿಬ್ಬಂದಿ ನೇಮಕಾತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ. ಅದು ಪೂರ್ಣಗೊಂಡ ನಂತರ ಹುದ್ದೆಗಳನ್ನು ಭರ್ತಿಮಾಡಲು ಕ್ರಮವಹಿಸಲಾಗುವುದು.

ಈ. ಸದರಿ ಹುದ್ದೆಗಳನ್ನು ಭರ್ತಿ ಮಾಡದಿರುವುದರಿಂದ ಸಾರ್ವಜನಿಕರಿಗೆ ಆಗಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ ಸರ್ಕಾರ ಈ ಹುದ್ದೆಗಳನ್ನು ತುಂಬಲು ತೆಗೆದುಕೊಂಡಿರುವ ಕ್ರಮಗಳೇನು?

ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಟ್ಟಕ್ಕೆ ಅನುಗುಣವಾಗಿ ವೈದ್ಯರು/ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದು, ಸದರಿ ಕೇಂದ್ರಗಳು ಸಾರ್ವಜನಿಕ ಸೇವೆ ಒದಗಿಸುತ್ತಿವೆ. ಸದರಿ ಸ್ಥಳಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಮೇಲ್ದರ್ಜೆಗೇರಿಸಿದ್ದಕ್ಕನುಗುಣವಾಗಿ ಹೆಚ್ಚುವರಿ ಹುದ್ದೆಗಳು ಮಂಜೂರಾಗಿದ್ದು, ಮೇಲೆ ತಿಳಿಸಿದಂತೆ ಅವುಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ.

ಅನುಬಂಧ – 1

ಹಾಸನ ಜಿಲ್ಲೆ ಹಾಸನ ತಾಲ್ಲೂಕು ಶಾಂತಿ ಗ್ರಾಮ ಮತ್ತು ಮೊಸಳೆ ಹೊಸಳ್ಳಿ, ಚನ್ನರಾಯಪಟ್ಟಣ ತಾಲ್ಲೂಕು ಉದಯಪುರ ಮತ್ತು ಹೊಳೆನರಸೀಪುರ ತಾಲ್ಲೂಕಿನ ಪಡುವಲಹಿಪ್ಪೆ ಸಮುದಾಯ ಆರೋಗ್ಯ ಕೇಂದ್ರಗಳಿಗೆ ಮಂಜೂರಾದ ಹುದ್ದೆಗಳು ಹಾಗೂ ಖಾಲಿ ಇರುವ ಹುದ್ದೆಗಳ ವಿವರಗಳು.

		ಮಂಜೂರಾದ ಹುದ್ದೆ	ಖಾಲಿ ಹುದ್ದೆ ವಿವರ			
ಕ್ರ ಸಂ.			ಶಾಂತಿ ಗ್ರಾಮ	ಎಂ. ಹೊಸಹಳ್ಳಿ	ಉದಯ ಪುರ	ಪಡುವ ಹಿಪ್ಪೆ
1	ವೈದ್ಯಾಧಿಕಾರಿಗಳು	4	3	3	1	2
2	ಸಹಾಯಕ ದಂತ ವೈದ್ಯರು	1	1	1	1	1
3	ಶುಶ್ರೂಷಕರು	6	5	3	6	5

4	ನೇತ್ರ ಸಹಾಯಕರು	1	1	1	–	1
5	ಕ್ಷ-ಕಿರಣ ತಂತ್ರಜ್ಞರು	1	1	1	1	1
6	ಫಾರ್ಮಸಿಸ್ಟ್	2	1	2	1	2
7	ಪ್ರಯೋಗ ಶಾಲಾ ತಂತ್ರಜ್ಞರು	1	–	1	–	–
8	ಕಛೇರಿ ಅಧೀಕ್ಷಕರು	1	1	–	1	1
9	ಪ್ರಥಮ ದರ್ಜೆ ಸಹಾಯಕರು	1	–	1	–	1
10	ದ್ವಿತೀಯ ದರ್ಜೆ ಸಹಾಯಕರು	1	1	1	–	–
11	ಕ್ಲರ್ಕ್ ಕಂ ಟೈಪಿಸ್ಟ್	1	1	1	1	1
12	ವಾಹನ ಚಾಲಕರು	2	2	2	1	2
13	ಗ್ರೂಪ್ 'ಡಿ'	12	10	11	9	9

ಶ್ರೀ ಹೆಚ್.ಡಿ.ರೇವಣ್ಣ: ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಶಾಂತಿ ಗ್ರಾಮ, ಮೊಸಳೆ ಹೊಸಳ್ಳಿ, ಚನ್ನರಾಯಪಟ್ಟಣ ತಾಲ್ಲೂಕು, ಉದಯಪುರ ಮತ್ತು ಹೊಳೆನರಸೀಪುರ ತಾಲ್ಲೂಕಿನ ಪಡುವಲಹಿಪ್ಪೆ ಗ್ರಾಮಗಳಲ್ಲಿ ಸಮುದಾಯ ಆಸ್ಪತ್ರೆಯ ಕಟ್ಟಡಗಳ ಕಾಮಗಾರಿ ಕೆಲಸ ಪೂರ್ಣಗೊಂಡಿದೆಯೆ? ಎಂದು ನಾನು ಪ್ರಶ್ನೆ ಕೇಳಿದ್ದಕ್ಕೆ ಸಮುದಾಯ ಆರೋಗ್ಯ ಕೇಂದ್ರಗಳು ಮೊಸಳೆ ಹೊಸಳ್ಳಿ, ಮತ್ತು ಪಡುವಲಹಿಪ್ಪೆ ಕಟ್ಟಡಗಳು ಪೂರ್ಣಗೊಂಡಿವೆ. ಸಮುದಾಯ ಆರೋಗ್ಯ ಕೇಂದ್ರಗಳು ಶಾಂತಿ ಗ್ರಾಮ ಮತ್ತು ಉದಯಪುರ ಕಟ್ಟಡ ಕಾಮಗಾರಿಗಳು ಇನ್ನೂ ನಿರ್ಮಾಣ ಹಂತದಲ್ಲಿವೆ ಎಂದು ಉತ್ತರ ಕೊಟ್ಟಿರುತ್ತಾರೆ. ಈ ಕಟ್ಟಡಗಳಿಗೆ ಮಂಜೂರಾದ ಹಣವೆಷ್ಟು? ಖರ್ಚು ಮಾಡಿದ ಹಣವೆಷ್ಟು? ಎನ್ನುವ ಮಾಹಿತಿ ಕೇಳಿದ್ದೆ. ಅದಕ್ಕೆ ಅವರು ಶಾಂತಿ ಗ್ರಾಮ ಸಮುದಾಯ ಆರೋಗ್ಯ ಕೇಂದ್ರಕ್ಕೆ 228 ಲಕ್ಷ ಮಂಜೂರಾಗಿದ್ದು ಇಲ್ಲಿಯವರೆವಿಗೂ 214 ಲಕ್ಷ ಖರ್ಚು ಆಗಿರುತ್ತದೆ, ಇನ್ನು 54 ಲಕ್ಷ ರೂಪಾಯಿ ಬೇಕಾಗುತ್ತದೆ ಎಂದು ಉತ್ತರ ಕೊಟ್ಟಿದ್ದಾರೆ. ಅದರಂತೆ ಉದಯಪುರ ಸಮುದಾಯ ಆರೋಗ್ಯ ಕೇಂದ್ರಕ್ಕೆ 221 ಲಕ್ಷ ಮಂಜೂರಾಗಿದ್ದರೆ ಇಲ್ಲಿಯವರೆವಿಗೂ 131 ಲಕ್ಷ ಖರ್ಚು ಆಗಿದೆ, ಇನ್ನೂ 99 ಲಕ್ಷ ರೂಪಾಯಿ

ಬೇಕಾಗುತ್ತದೆ ಎಂದು ಉತ್ತರ ಕೊಟ್ಟಿದ್ದಾರೆ. ಇದರ ಜೊತೆಗೆ ಸದರಿ ಸಮುದಾಯ ಆಸ್ಪತ್ರೆಗಳಿಗೆ ಎಷ್ಟು ಹುದ್ದೆಗಳು ಮಂಜೂರಾಗಿವೆ? ಎಷ್ಟು ಫಿಲ್ ಅಪ್ ಆಗಿವೆ ಎಂದು ಕೇಳಿದ್ದಕ್ಕೆ ಶಾಂತಿ ಗ್ರಾಮ ಸಮುದಾಯ ಆರೋಗ್ಯ ಕೇಂದ್ರಕ್ಕೆ ಮಂಜೂರಾಗಿರುವ ಹುದ್ದೆಗಳು 34 ಇದ್ದರೆ ಖಾಲಿ ಇರುವುದು 27 ಹುದ್ದೆಗಳು ಇವೆ. ಮೊಸಳೆ ಹೊಸಳ್ಳಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಮಂಜೂರಾಗಿರುವ ಹುದ್ದೆಗಳು 34 ಇದ್ದರೆ ಇಲ್ಲಿಯೂ ಕೂಡ 28 ಹುದ್ದೆಗಳು ಖಾಲಿ ಇವೆ. ಅದರಂತೆ ಉದಯಪುರ ಸಮುದಾಯ ಆರೋಗ್ಯ ಕೇಂದ್ರಕ್ಕೆ 34 ಹುದ್ದೆಗಳು ಮಂಜೂರಾಗಿದ್ದರೆ ಇಲ್ಲಿಯೂ ಕೂಡ 22 ಹುದ್ದೆಗಳು ಖಾಲಿ ಇವೆ. ಪಡುವಲಹಿಪ್ಪೆ ಸಮುದಾಯ ಆರೋಗ್ಯ ಕೇಂದ್ರಕ್ಕೆ 34 ಹುದ್ದೆಗಳು ಮಂಜೂರಾಗಿದ್ದರೆ ಇಲ್ಲಿಯೂ ಕೂಡ 26 ಹುದ್ದೆಗಳು ಖಾಲಿ ಇವೆ. ಈ ರೀತಿ ಆದರೆ ಹೇಗೆ? ಉದಾ:ಗೆ ಹೇಳುವುದಾದರೆ, ಶಾಂತಿ ಗ್ರಾಮ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಶುಶ್ರೂಷಕರು ಹುದ್ದೆ ಇರುವುದು 6, ಅದರಲ್ಲಿ ಖಾಲಿ ಇರುವುದು 5 ಎಂದರೆ ಹೇಗೆ ಕೆಲಸ ಮಾಡುವುದು? ಅದೇ ತರಹ ಮೊಸಳೆ ಹೊಸಳ್ಳಿ ಸಮುದಾಯ ಆರೋಗ್ಯ ಕೇಂದ್ರಕ್ಕೆ 6 ಶುಶ್ರೂಷಕರು ಹುದ್ದೆಗಳು ಮಂಜೂರಾಗಿದ್ದರೆ ಆ 6 ಹುದ್ದೆಗಳು ಖಾಲಿ ಇದ್ದರೆ ಏನು ಮಾಡುವುದು? ಈ ರೀತಿ ಆಗಬಾರದು. ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮುಖ್ಯವಾಗಿರತಕ್ಕಂಥ ಹುದ್ದೆಗಳೆಲ್ಲವೂ ಖಾಲಿ ಇದ್ದರೆ ಅಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಆಸ್ಪತ್ರೆ ಕಟ್ಟಿಸಿದ್ದರೂ ಏನೂ ಪ್ರಯೋಜನವಾಗುವುದಿಲ್ಲ. ಹೀಗಾಗಿ ಮೊದಲು ಆಸ್ಪತ್ರೆಗಳಿಗೆ ಅಗತ್ಯವಾಗಿರತಕ್ಕಂಥ ಸಿಬ್ಬಂದಿಗಳನ್ನು ಕೊರತೆಯಾಗದಂತೆ ತುಂಬಬೇಕಾಗುತ್ತದೆ. ನೀವು ಎಷ್ಟು ದಿವಸದಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬುತ್ತೀರಿ? ಅಲ್ಲಿ ಮೂಲಭೂತ ಸೌಲಭ್ಯಗಳು ಇರಬೇಕಾಗುತ್ತದೆ. ಈಗಾಗಲೇ ಈ ಬಗ್ಗೆ ಪತ್ರ ಕೊಟ್ಟಿದ್ದೇನೆ. ತಮ್ಮ ಮೂಲಕ ಇನ್ನೊಮ್ಮೆ ಮಾನ್ಯ ಸಚಿವರಿಗೆ ಪತ್ರ ಕಳುಹಿಸಿ ಕೊಡುತ್ತೇನೆ. ಸದ್ಯಕ್ಕೆ ಬೇಕಾದರೆ ಗುತ್ತಿಗೆ ಆಧಾರದ ಮೇಲಾದರೂ ತುಂಬಿ ಗ್ರಾಮೀಣ ಭಾಗದ ಜನರಿಗೆ ಅನುಕೂಲ ಮಾಡಿ ಕೊಡಿ ಎಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಶ್ರೀರಾಮುಲು:– ತಜ್ಞ ವೈದ್ಯರುಗಳು ಬೇಕಾಗಿದ್ದಲ್ಲಿ ಸಮಾಲೋಚನೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅನುಮತಿ ಈಗಾಗಲೇ ನೀಡಲಾಗಿದೆ. ಇವರಿಗೆ ಗೌರವಧನವಾಗಿ ಮಾಸಿಕ 25,000 ರೂಪಾಯಿಯಿಂದ 50,000 ರೂಪಾಯಿವರೆಗೆ ಕೊಡಬಹುದು. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕೊನೆಪಕ್ಷ 7 ಜನ ಸಿಬ್ಬಂದಿ ಇರಬೇಕಾಗುತ್ತದೆ. ಅಂದರೆ, ಡಾಕ್ಟರ್, ಪ್ಯಾರಾಮೆಡಿಕಲ್ ಸಿಬ್ಬಂದಿ, ಲ್ಯಾಬ್ ಟೆಕ್ನಿಷಿಯನ್, ಪುರುಷ ಆರೋಗ್ಯ ಸಹಾಯಕ, ನರ್ಸ್, ಎಎನ್ಎಂ, ಹೀಗೆ 7 ಜನ ಸಿಬ್ಬಂದಿ ಇರಬೇಕು. ಅದೇ ರೀತಿ ಸಮುದಾಯ ಆರೋಗ್ಯ ಕೇಂದ್ರಗಳಿಗೆ ಸುಮಾರು 34 ಜನ ಸಿಬ್ಬಂದಿಯವರು ಇರಬೇಕಾಗುತ್ತದೆ. ಉದಯಪುರ ಮತ್ತು ಶಾಂತಿ ಗ್ರಾಮಕ್ಕೆ ಸಿಬ್ಬಂದಿಯ ಕೊರತೆಯಿದೆ ಎಂದು ತಾವೇನು

ಕೇಳಿದಿರಿ. ಕೇವಲ ಒಂದು ತಿಂಗಳೊಳಗೆ 5,500 ಹುದ್ದೆಗಳು ಭರ್ತಿಯಾದ ಕೂಡಲೇ ನಿಮಗೆ ಎಲ್ಲೆಲ್ಲಿ ಸಿಬ್ಬಂದಿ ಕಡಿಮೆ ಇದೆ ಅಲ್ಲಿಗೆ ಸಿಬ್ಬಂದಿಗಳನ್ನು ಭರ್ತಿ ಮಾಡಿ ಕೊಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ತಾವು ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟು ಗುತ್ತಿಗೆಯಾಧಾರದ ಮೇಲೆ ತುಂಬುವಂಥ ಕೆಲಸವಾದರೂ ಮಾಡಿ. ಏಕೆಂದರೆ, ನಾಳೆ ಅದು ಏನಾದರೂ ಕೋರ್ಟಿಗೆ ಹೋಗುವುದು ಪುನಃ ತಡವಾಗುವುದು ಬೇಡ. ಅದು ಆಗುವುದಕ್ಕಿಂತ ಜಿಲ್ಲಾಧಿಕಾರಿಗಳ ಮುಖಾಂತರ ಈಗ ಎಲ್ಲಿ ಪೋಸ್ಟ್ ಖಾಲಿ ಇದೆ ಅಲ್ಲಿಗೆ ಅವಶ್ಯಕತೆ ಇದ್ದರೆ ಮಾತ್ರ ತೆಗೆದುಕೊಳ್ಳಿ. ಅವಶ್ಯಕತೆ ಇರದೇ ಇರತಕ್ಕಂಥ ಕ್ಲರಿಕಲ್ ಪೋಸ್ಟ್‌ಗಳನ್ನು ತೆಗೆದುಕೊಳ್ಳಿ ಎಂದು ಹೇಳುವುದಿಲ್ಲ. ಅವಶ್ಯಕತೆ ಇರತಕ್ಕಂಥ ನರ್ಸಿಂಗ್ ಪೋಸ್ಟ್ 6 ಇದ್ದರೆ 6 ಪೋಸ್ಟ್ ಖಾಲಿ ಇದೆ, ಡಾಕ್ಟರ್ಸ್ 5 ಪೋಸ್ಟ್ ಇದ್ದರೆ 5 ಪೋಸ್ಟ್ ಖಾಲಿ ಇದೆ, ಇಂಥ ಪೋಸ್ಟ್‌ಗಳನ್ನು ಕೂಡಲೇ ತುಂಬಿಕೊಳ್ಳುವುದಕ್ಕೆ ಜಿಲ್ಲಾಧಿಕಾರಿಗಳಿಗೆ ನೀವು ಒಂದು ಸೂಚನೆ ಕೊಟ್ಟು ಹದಿನೈದು ದಿವಸದಲ್ಲಿ ಮಾಡಿ ಎಂದು ತಮ್ಮ ಕಡೆಯಿಂದ ಡೈರೆಕ್ಷನ್ ಕೊಡಿ.

ಶ್ರೀ ಬಿ.ಶ್ರೀರಾಮುಲು : ಮಾನ್ಯ ರೇವಣ್ಣನವರೇನು ಪ್ರಶ್ನೆ ಕೇಳಿದ್ದಾರೆ, ಎಂಬಿಬಿಎಸ್ ಡಾಕ್ಟರ್ಸ್ ರವರನ್ನು ತೆಗೆದುಕೊಳ್ಳುವುದಕ್ಕೆ ಮೊನ್ನೆ ಅವರು ಮುಷ್ಕರ ನಡೆಸಿದಂಥ ಸಂದರ್ಭದಲ್ಲಿ ಡಾಕ್ಟರ್ಸ್‌ರವರನ್ನು ಗುತ್ತಿಗೆಯಾಧಾರದ ಮೇಲೆ ತೆಗೆದುಕೊಳ್ಳಬಾರದೆನ್ನುವ ಷರತ್ತನ್ನು ವಿಧಿಸಿದ್ದರು. ತಜ್ಞ ವೈದ್ಯರನ್ನು ಹಾಗೂ ಗ್ರೂಪ್ ಡಿ ನೌಕರರನ್ನು ತೆಗೆದುಕೊಳ್ಳುವುದಕ್ಕೆ ಮತ್ತು ಬೇರೆ ಬೇರೆ ಯಾವ್ಯಾವ ಹುದ್ದೆಗಳು ಖಾಲಿ ಇದೆ ಎಂದು ನೋಡಿಕೊಂಡು ತಕ್ಷಣ ಆ ಬಗ್ಗೆ ಜಿಲ್ಲಾಧಿಕಾರಿಗಳ ಜೊತೆಗೆ ಮಾತನಾಡಿ ಯಾವ್ಯಾವ ಪೋಸ್ಟ್‌ಗಳನ್ನು ಭರ್ತಿ ಮಾಡುವುದಕ್ಕೆ ಆಗುತ್ತದೆ ಮತ್ತು ನಮ್ಮ ಇಲಾಖೆಯಿಂದ ಯಾವ್ಯಾವ ಪೋಸ್ಟ್‌ಗಳನ್ನು ಕೊಡುವುದಕ್ಕೆ ಆಗುತ್ತದೆ ಎಂಬುದನ್ನು ನೋಡಿಕೊಂಡು ಆದಷ್ಟು ಬೇಗನೆ ಆ ಪ್ರಕ್ರಿಯೆಯನ್ನು ಪೂರ್ಣ ಮಾಡಿ ಕೊಡುತ್ತೇನೆ.

ಅಧ್ಯಕ್ಷರು : ಹ್ಯಾರಿಸ್ ರವರ ಪ್ರಶ್ನೆ ಬೇರೆ ಇಲಾಖೆಗೆ ವರ್ಗಾವಣೆಯಾಗಿರುತ್ತದೆ. ಮುಂದಿನ ವಾರದಲ್ಲಿ ತೆಗೆದುಕೊಳ್ಳುತ್ತೇವೆ.

ಶ್ರೀ ಎನ್.ಎ.ಹ್ಯಾರಿಸ್ : ದಯವಿಟ್ಟು ನನ್ನ ಪ್ರಶ್ನೆ ಓದುವುದಕ್ಕೆ ಅವಕಾಶ ಕೊಡಬೇಕು. ರಾಜ್ಯದಲ್ಲಿ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿನ ತ್ಯಾಜ್ಯ ವಸ್ತುಗಳ ನಿರ್ವಹಣೆ ಕುರಿತು ಪ್ರಸ್ತುತ ಜಾರಿಯಲ್ಲಿರುವ ಕಾನೂನಿನ ನಿಯಮಗಳು ಯಾವುವು: ಅವುಗಳ ಪಾಲನೆಯು ಸರಿಯಾಗಿ ನಡೆಯುತ್ತಿದೆಯೇ: ಹಾಗಿಲ್ಲದಿದ್ದಲ್ಲಿ, ಆ ಕುರಿತು ಸರ್ಕಾರ ಕೈಗೊಂಡ ಕ್ರಮಗಳು ಯಾವುವು? ಇದು ನಮಗೆ ಸೇರುವುದಿಲ್ಲ ಎಂದರೆ ಇದು ಯಾರಿಗೆ ಸೇರುತ್ತದೆ?

ಅಧ್ಯಕ್ಷರು : ನಿಮ್ಮ ಪ್ರಶ್ನೆ ಪರಿಸರ ಇಲಾಖೆಗೆ ವರ್ಗಾಯಿಸಿದ್ದಾರೆ.

ಶ್ರೀ ಎನ್.ಎ.ಹ್ಯಾರಿಸ್ : ಆಸ್ಪತ್ರೆಯಲ್ಲಿರುವ ವೇಸ್ಟ್ ಪರಿಸರ ಇಲಾಖೆಗೆ ಏನು ಸಂಬಂಧ ಇದೆ? ಆಸ್ಪತ್ರೆಯಲ್ಲಿರುವ ವೇಸ್ಟ್ ಯಾವ ತರಹ ಮ್ಯಾನೇಜ್ ಮಾಡುತ್ತೀರಿ? ಏನು ಮಾಡುತ್ತೀರಿ? ಎಂದು ನಾನು ಕೇಳಿದ್ದೇನೆ. ಇತ್ತೀಚೆಗೆ ಆಸ್ಪತ್ರೆಯ ವೇಸ್ಟ್‌ನ್ನು ಸ್ಯಾನಿಟರಿ ಪೈಪ್‌ನ ಒಳಗಡೆ ಹಾಕಿದ್ದರಿಂದಾಗಿ ಪೈಪ್ ಎಲ್ಲಾ ಬ್ಲಾಕ್ ಆಗಿ ಬಹಳ ದೊಡ್ಡ ತೊಂದರೆಯಾಗಿದೆ.

ಅಧ್ಯಕ್ಷರು : ಸುರೇಶ್ ಕುಮಾರ್‌ರವರೆ, ಅವರು ಏನು ಹೇಳುತ್ತಿದ್ದಾರೆಂದರೆ, ಈ ಸರಕಾರಿ ಆಸ್ಪತ್ರೆಯಲ್ಲಿರುವ ತ್ಯಾಜ್ಯವಸ್ತುಗಳ ನಿರ್ವಹಣೆಯ ಬಗ್ಗೆ ಕೇಳಿದ್ದಾರೆ. ಇದು ವೈದ್ಯಕೀಯ ಶಿಕ್ಷಣ ಇಲಾಖೆಗೆ ಬರುತ್ತದೆ ಎನ್ನುವುದು ಅವರ ಅಭಿಪ್ರಾಯವಿದೆ. ಆದರೆ ಇಲ್ಲಿ ಈ ಪ್ರಶ್ನೆಯನ್ನು ಪರಿಸರ ಇಲಾಖೆಗೆ ಬರುತ್ತದೆಂದು ವರ್ಗ ಮಾಡಿದ್ದಾರೆ. ಅದಕ್ಕಾಗಿ ಇದು ಸರಿ ಇದೆಯೇ ಎಂದು ಕೇಳುತ್ತಿದ್ದಾರೆ. ತಾವು ಈ ಬಗ್ಗೆ ಕ್ಲಾರಿಫೈ ಮಾಡಿ.

ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಅಧ್ಯಕ್ಷರೆ ತಾವು ಇದನ್ನು ಹೇಗೆ ಜಸ್ಟಿಫೈ ಮಾಡಬಹುದು? Medical waste management is part of the Health department. ಹೀಗಿರುವಾಗ ನೀವು ಹೇಗೆ ಇದನ್ನು ಪರಿಸರ ಇಲಾಖೆಗೆ ವರ್ಗ ಮಾಡುತ್ತೀರಿ?

ಶ್ರೀ ರಾಮಚಂದ್ರ ಗೌಡ : ಅಧ್ಯಕ್ಷರೆ, ಈಗ ನನ್ನ ಬಳಿ ಅರ್ಧ ಭಾಗ ಉತ್ತರ ಇದೆ ನಾನು ಉತ್ತರ ಕೊಡುತ್ತೇನೆ. ನನಗೆ ರೆಫರ್ ಆಗಿರಲಿಲ್ಲ. ಈಗ ಬೆಂಗಳೂರಿನಲ್ಲಿರುವ ಆಸ್ಪತ್ರೆಗಳಲ್ಲಿ ಏನು ನಡೆಯುತ್ತಿವೆ,

ಅಧ್ಯಕ್ಷರು : ಒಂದು ನಿಮಿಷ. ಈ ಪ್ರಶ್ನೆಗೆ ವೈದ್ಯಕೀಯ ಶಿಕ್ಷಣ ಇಲಾಖೆಯವರು ಉತ್ತರ ಕೊಡುತ್ತೀರೋ ಅಥವಾ ಪರಿಸರ ಇಲಾಖೆಯವರು ಉತ್ತರ ಕೊಡುತ್ತೀರೋ ಎನ್ನುವ ಬಗ್ಗೆ ಡಿಸೈಡ್ ಮಾಡಿ. ಬೇಕಾದರೆ ಈ ಪ್ರಶ್ನೆ ಮುಂದಿನ ವಾರ ಇಡೋಣ. ಈಗ ಅರ್ಧ ಉತ್ತರ ಕೊಡುವುದು ಬೇಡ. ಅವರಿಗೆ ಲಿಖಿತವಾಗಿ ಉತ್ತರವೇ ಬಂದಿಲ್ಲ.

ಶ್ರೀ ರಾಮಚಂದ್ರ ಗೌಡ : ಆಗಬಹುದು.

ಅಧ್ಯಕ್ಷರು : ಈ ಪ್ರಶ್ನೆಯ ಬಗ್ಗೆ ಮಾನ್ಯ ಆರೋಗ್ಯ ಸಚಿವರು ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಸಚಿವರು ಚರ್ಚಿಸಿ. ಪರಿಸರ ಇಲಾಖೆಗೆ ಬರುತ್ತದೋ ಎನ್ನುವುದನ್ನು ನೋಡಿಕೊಂಡು ಮುಂದಿನ ವಾರ ಅದಕ್ಕೆ ಉತ್ತರ ಕೊಡಬೇಕು.

ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಈ ಪ್ರಶ್ನೆ ಹೆಲ್ತ್ ಡಿಪಾರ್ಟ್‌ಮೆಂಟ್‌ಗೆ ಬರುತ್ತದೆ.

ಶ್ರೀ ಪಿ.ಎಂ.ಅಶೋಕ : ಸಾರ್ ಉತ್ತರ ಕೊಡುವಾಗ ಒಬ್ಬರಿಗೊಬ್ಬರು ಕೋಆರ್ಡಿನೇಷನ್ ಮಾಡಿಕೊಂಡು ತಾನೇ ಉತ್ತರ ಕೊಡಬೇಕು.

ಅಧ್ಯಕ್ಷರು : ಈಗ ಅವರು ಆರೋಗ್ಯ ಇಲಾಖೆಗೆ ಪ್ರಶ್ನೆ ಕೇಳಿದ್ದಾರೆ. ಅವರು ಪರಿಸರ ಇಲಾಖೆಗೆ ಹೋಗುತ್ತದೆ ಎಂದು ಹೇಳಿದ್ದಾರೆ. ಇದನ್ನು ಸರಿಪಡಿಸಿ ಯಾರು ಉತ್ತರ ಕೊಡಬೇಕೆಂದು ನಿರ್ಧರಿಸಿ ಮುಂದಿನ ವಾರ ಉತ್ತರ ಕೊಡಿಸುತ್ತೇನೆ.

ಶ್ರೀ ಸ.ರಾ.ಮಹೇಶ್ : ಉತ್ತರ ಯಾರಾದರೂ ಕೊಡಲಿ. ಆದರೆ ಈ ರೀತಿಯಾಗಿ ಸದನಕ್ಕೆ ತಪ್ಪು ಮಾಹಿತಿ ಕೊಡುವವರು ಸಾರ್ವಜನಿಕರಿಗೆ ಯಾವ ರೀತಿ ನಡೆದುಕೊಳ್ಳುತ್ತಾರೆಂದು ಯೋಚಿಸಬೇಕಾಗುತ್ತದೆ.

ಅಧ್ಯಕ್ಷರು : ಮುಂದಿನ ವಾರ ಉತ್ತರ ಕೊಡಿಸುತ್ತೇನೆ.

ಶ್ರೀ ಸ.ರಾ.ಮಹೇಶ್ : ಉತ್ತರ ಕೊಡುವುದು ಬೇರೆ. ಆದರೆ, ಈ ರೀತಿ ಉತ್ತರ ಕೊಟ್ಟರೆ ಹೇಗೆ?

ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಈ ರೀತಿಯಾಗಿ ಸದನವನ್ನು ತಪ್ಪು ದಾರಿಗೆ ಎಳೆದರೆ ಹೇಗೆ?

ಶ್ರೀ ಕೆ.ಎಂ.ಕೃಷ್ಣಮೂರ್ತಿ : ಇದನ್ನು ಆರೋಗ್ಯ ಇಲಾಖೆಗೆ ಬಿಟ್ಟು ಪರಿಸರ ಇಲಾಖೆಗೆ ವಹಿಸಿದರೆ ಅವರು ಮಾಡುತ್ತಾರೆಯೆ? ಅದು ಪರಿಸರ ಇಲಾಖೆಗೆ ಬರುವುದೇ ಇಲ್ಲ.

ಅಧ್ಯಕ್ಷರು : ಆಯಿತು ಬಿಡಿ. ಮುಂದಿನ ವಾರ ಉತ್ತರ ಕೊಡಿಸುತ್ತೇನೆಂದು ಹೇಳಿದ್ದೇನೆ ಅಲ್ಲವೆ?

ಅಧ್ಯಕ್ಷರು : ಮಾನ್ಯ ಕೃಷ್ಣಮೂರ್ತಿಯವರೆ, ದಯವಿಟ್ಟು ಕುಳಿತುಕೊಳ್ಳಿ. ಈಗ ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ. ಮುಂದಿನ ಪ್ರಶ್ನೆ ಮಾನ್ಯ ರಾಜುಗೌಡರವರದು.

ಶ್ರೀ ಕೆ.ಎಂ.ಕೃಷ್ಣಮೂರ್ತಿ:– ಸದರಿ ಪ್ರಶ್ನೆ ಪರಿಸರ ಇಲಾಖೆಗೆ ಅಥವಾ ಆರೋಗ್ಯ ಇಲಾಖೆಗೆ ಬರುತ್ತದೆಂಬುದರ ಬಗ್ಗೆ ..

(ಗೊಂದಲ)

ಅಧ್ಯಕ್ಷರು:– ಇದು ಮಾನ್ಯ ಹ್ಯಾರಿಸ್‌ನವರ ಪ್ರಶ್ನೆಯಾಗಿರುವುದರಿಂದ ಅವರೇ ಮಾತನಾಡಲಿ. ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಕೆ.ಎಂ.ಕೃಷ್ಣಮೂರ್ತಿ:– ಎಲ್ಲಾ ಕಡೆ ಇದೇ ಸಮಸ್ಯೆ ಇದೆ... ಇಡೀ ರಾಜ್ಯದಲ್ಲಿ ಈ ಸಮಸ್ಯೆ ಇದೆ.

ಅಧ್ಯಕ್ಷರು:– ಎಲ್ಲಾ ಕಡೆ ಇರುವ ಸಮಸ್ಯೆ ಬಗ್ಗೆ ಪ್ರಶ್ನೆ ಬಂದಾಗ ನೋಡೋಣ. ಈಗ ತಾವು ದಯವಿಟ್ಟು ಕುಳಿತುಕೊಳ್ಳಿ. ಸದರಿ ಪ್ರಶ್ನೆ ಮೇಲೆ ಇನ್ನು ಚರ್ಚೆಯಾಗಿಲ್ಲ. ಮತ್ತೆ ಅದಕ್ಕೆ ಉತ್ತರ ಕೂಡ ಕೊಟ್ಟಿಲ್ಲ. ಮಾನ್ಯ ಹ್ಯಾರಿಸ್‌ರವರೆ, ತಮ್ಮ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳುತ್ತೇನೆ. ಮಾನ್ಯ ಕೃಷ್ಣಮೂರ್ತಿಯವರೆ, ಈ ಪ್ರಶ್ನೆ ಇನ್ನು ಚರ್ಚೆಗೆ ಬಂದಿಲ್ಲ. ಈ ಪ್ರಶ್ನೆಗೆ ಯಾವ ಇಲಾಖೆಯವರು ಉತ್ತರ ಕೊಡಬೇಕೆಂಬುದರಲ್ಲಿದೆ.

O-1054-2D

ಶ್ರೀ ಎಸ್.ಸುರೇಶ್ ಕುಮಾರ್:– ಮಾನ್ಯ ಅಧ್ಯಕ್ಷರೆ, ಆಸ್ಪತ್ರೆಗಳನ್ನು ನೋಡಿಕೊಳ್ಳುವುದು ಇವರ ಜವಾಬ್ದಾರಿ. ಆದರೆ, Pollution Control Boardನವರು ಎಲ್ಲಾ ಕಡೆ ಹೋಗಿ ಇದರ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಆದ್ದರಿಂದ, ಪರಿಸರ ಇಲಾಖೆಯಿಂದ ಸದರಿ ಪ್ರಶ್ನೆಗೆ ಉತ್ತರ ಕೊಡಿಸುತ್ತೇವೆ.

ಅಧ್ಯಕ್ಷರು:– ಆಯಿತು.

ಶ್ರೀ ಎನ್.ಎ.ಹ್ಯಾರಿಸ್:– ಮಾನ್ಯ ಅಧ್ಯಕ್ಷರೆ, ಒಬ್ಬ ಸದಸ್ಯನಾಗಿ ಈ ಪ್ರಶ್ನೆಯನ್ನು ಕೇಳಿದ್ದೇನೆ. ಇದೇನು ಬೇರೆ ರಾಜ್ಯಕ್ಕೆ ಸಂಬಂಧಪಟ್ಟಂಥ ಪ್ರಶ್ನೆಯಲ್ಲ. ನಮ್ಮ ರಾಜ್ಯದ ಸರ್ಕಾರಕ್ಕೆ ಸೇರಿರತಕ್ಕಂಥ ಪ್ರಶ್ನೆಯಾಗಿದೆ. ಇದನ್ನು ಸಂಬಂಧಪಟ್ಟಂಥ ಇಲಾಖೆ ವರ್ಗಾವಣೆ ಮಾಡುವುದನ್ನು ಬಿಟ್ಟು ಯಾರಿಗೆ ಸೇರುತ್ತದೆ ಅವರು ಉತ್ತರ ಕೊಡುತ್ತಾರೆಂದು ಹೇಳಿದರೆ ಹೇಗೆ?

ಅಧ್ಯಕ್ಷರು:– ಈಗಾಗಲೇ ಸಂಬಂಧಪಟ್ಟಂಥ ಇಲಾಖೆ ವರ್ಗಾವಣೆ ಮಾಡಿದ್ದಾರೆ. ಈಗ ಆ ಇಲಾಖೆಯಿಂದ ಉತ್ತರ ಬರಬೇಕು. ಮುಂದಿನ ವಾರ ನಿಮ್ಮ ಪ್ರಶ್ನೆಗೆ ಉತ್ತರ ಕೊಡಿಸುತ್ತೇನೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಂಜೂರಾದ ಕೊಳವೆ ಬಾವಿಗಳು.

13(128) ಶ್ರೀ ನರಸಿಂಹನಾಯಕ (ರಾಜು ಗೌಡ)
ಶ್ರೀ ಡಿ.ಸುಧಾಕರ್ ಸಮಾಜ ಕಲ್ಯಾಣ ಸಚಿವರು

ಅ) ಗುಲ್ಬರ್ಗ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಮಂಜೂರಾದ ಒಟ್ಟು ಕೊಳವೆ ಬಾವಿಗಳೆಷ್ಟು;

2008–09ನೇ ಸಾಲಿಗೆ ಗುಲ್ಬರ್ಗಾ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯವರಿಗೆ 775 ಹಾಗೂ ಪರಿಶಿಷ್ಟ ಪಂಗಡದವರಿಗೆ 178 ಕೊಳವೆ ಬಾವಿಗಳು ಮಂಜೂರುಮಾಡಲಾಗಿದೆ.

ಆ) ಇದರಲ್ಲಿ ಎಷ್ಟು ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಡಲಾಗಿದೆ;

ಇ) ಎಷ್ಟು ಕೊಳವೆ ಬಾವಿಗಳಿಗೆ ಮೋಟಾರ್ ಪಂಪ್‌ಸೆಟ್ ಹಾಗೂ ಇತರೆ ಸಾಮಾಗ್ರಿಗಳನ್ನು ಒದಗಿಸಿ ಕೊಡಲಾಗಿದೆ?

ಈ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕೊಡಲು ಹಾಗೂ ಬೇಕಾದ ಪಂಪ್ ಸೆಟ್‌ಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ನರಸಿಂಹನಾಯಕ(ರಾಜುಗೌಡ):– ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. 2008–09ನೇ ಸಾಲಿಗೆ